ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಬಾಲಾಜಿ ಟ್ರೇಡಿಂಗ್ ಕಂಪನಿ ಮತ್ತು ಇತರರು ವಿರುದ್ಧ

ಸೈಫುಲ್ಲಾ ಖಾನ್ ಗಫಾರ್ ಖಾನ್ ಸಾಹುಕಾರ್ ಮತ್ತು ಮತ್ತೊಬ್ಬರು

ಕ್ರಿಮಿನಲ್ ಅರ್ಜಿಸಂಖ್ಯೆ: 101070/2016, ದಿನಾಂಕ 1 ನೇ ಫೆಬ್ರುವರಿ, 2017

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:

ಅರ್ಜಿದಾರರು, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 415, 417, 420, 463, 465, 468, 471, 472, 473 ಹಾಗೂ 474 ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ 114 ನೋಂದಣಿಯಾದ ಉತ್ತರ ಕನ್ನಡದ ಸಿರಸಿಯ ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ) ಹಾಗೂ ಪ್ರಧಾನ ಜೆ.ಎಂ.ಎಫ್.ಸಿ ಯ ಕಡತದ ಮೇಲೆ ಇತ್ಯರ್ಥದಲ್ಲಿರುವ ಸಿ.ಸಿ.ಸಂಖ್ಯೆ: 32/2015 ರಲ್ಲಿನ ಇಡೀ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

2. ದಾಖಲೆಯಿಂದ ತಿಳಿದುಬಂದ ಈ ಪ್ರಕರಣದ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ.ಪ್ರತ್ಯರ್ಜಿದಾರ ಸಂ .1, ಪಿ.ಸಿ.ಸಂಖ್ಯೆ: 4/2015 ರಲ್ಲಿ ಖಾಸಗಿ ದೂರನ್ನು ದಾಖಲಿಸಿದ್ದು, ಇದು ತರುವಾಯ ಈ ಮುಂದೆ ಮಾಡಲಾದ ಎಲ್ಲಾ ಆಪಾದನೆಗಳನ್ನು ಸಿಸಿ ಸಂ .32/2015 ಎಂದು ನೋಂದಾಯಿಸಲಾಗಿರುತ್ತದೆ.ದೂರುದಾರ ಸೈಫುಲ್ಲಾ ಖಾನ್ ಗಫಾಲ್ರ್ಯಾವಲ್ ಸವಾರ್ (ಸಂಕ್ಷಿಪ್ತವಾಗಿ ' ಸೈಫುಲ್ಲಾಖಾನ್ ' ಎಂದು ಕರೆಯಲಾಗಿದೆ) ಆಪಾದಿತ ಸಂ .1-ಸಂಸ್ಥೆ (ಇಲ್ಲಿನ ಅರ್ಜಿದಾರ ಸಂ .1) ಗೆ 32, 64, 313/- ರೂ.ಗಳ ಮೌಲ್ಯದ ಹತ್ತಿಯನ್ನು ಮಾರಾಟ ಮಾಡಿರುತ್ತಾನೆ.ಸದರಿ ವ್ಯವಹರಣೆಯನ್ನು ಎಲ್ಲಾ ವಿವರಗಳೊಂದಿಗೆ ದೂರಿನಲ್ಲಿ ವಿವರಿಸಲಾಗಿರುತ್ತದೆ.ಅಲ್ಲದೆ, ಫಿರ್ಯಾದುದಾರನೂ ಸಹ ಓ.ಎಸ್.ಸಂ .49/2004 ರಲ್ಲಿ 26,64,313 ರೂ.ಗಳ ಮೊಬಲಗಿನ ವಸೂಲಾತಿಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಿರುತ್ತಾನೆಂದೂ ಹೇಳಲಾಗಿದ್ದು ಅದರಲ್ಲಿ ಆ ದಾವೆಯಲ್ಲಿನ ಪ್ರತಿವಾದಿಗಳು ಅಂದರೆ ಇಲ್ಲಿನ ಅರ್ಜಿದಾರರು ಅವರ ಹಾಜರಿಯಲ್ಲಿ ನಮೂದಿಸಿ, ಅವರ ಕರ್ತವ್ಯ ನಿರ್ವಹಣೆಯನ್ನು ನಿರಾಕರಿಸಿರುತ್ತಾರೆ.ಪ್ರತಿವಾದಿ| ಆಪಾದಿತನು ವಾದಿ (ಫಿರ್ಯಾದುದಾರ ಹಾಗೂ ಪ್ರತಿವಾದಿಗಳು/ಆಪಾದಿತ ಇವರುಗಳ ನಡುವಿನ ಲೆಕ್ಕಪತ್ರಗಳು ಇತ್ಯರ್ಥಗೊಂಡಿವೆಯೆಂಬುದನ್ನು ಹೇಳಿ,ದಿನಾಂಕ: 26.3.2004 ರಂದು ವಾದಿ/ಫಿರ್ಯಾದುದಾರ ಒಂದು ಪತ್ರವನ್ನು ನೀಡಿರುತ್ತಾನೆಂದು ವಾದಿಸಿರುತ್ತಾನೆ.ದಾವೆಯು ಅಧಿವಿಚಾರಣೆಗೆ ಹೋಗಿರುತ್ತದೆ ಹಾಗೂ ಆ ತರುವಾಯ, ವಿಲೇಯಾಗಿರುತ್ತದೆ.ಪ್ರತಿವಾದಿಗಳು/ಆಪಾದಿತರು ನಿಶಾನೆ ಡಿ .1 ರಿಂದ ಡಿ .10 ರ ವರೆಗಿನ ನಿಶಾನೆಗಳನ್ನು ಹಾಜರುಪಡಿಸಿರುತ್ತಾರೆಂದು ಫಿರ್ಯಾದಿನಲ್ಲಿ ವಾದಿಸಿರುತ್ತಾರೆ ಹಾಗೂ ಸದರಿ ದಸ್ತಾವೇಜುಗಳನ್ನು ವಾದಿ/ಫಿರ್ಯಾದುದಾರನು ಬರೆದುಕೊಟ್ಟಿರುತ್ತಾನೆಂದು ಒತ್ತಿ ಹೇಳಿರುತ್ತಾರೆ.ವಾಸ್ತವವಾಗಿ, ವಾದಿ ಫಿರ್ಯಾದುದಾರ ಆ ದಸ್ತಾವೇಜುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಸಾಕ್ಷಿಯಾಗಿ ಬಳಸಿಕೊಳ್ಳಲು ಕಪಟದಿಂದ ಸೃಷ್ಟನೆ ಮಾಡಿದ ದಸ್ತಾವೇಜುಗಳೆಂದು ವಾದಿಸಿರುತ್ತಾರೆ.ಇದು ಅಧಿವಿಚಾರಣೆಯ ಸಂದರ್ಭದಲ್ಲಿ ನಡೆದ ವಿಚಾರವಾಗಿದ್ದು, ಅಧಿವಿಚಾರಣಾ ನ್ಯಾಯಾಧೀಶರು, ಆ ದಸ್ತಾವೇಜುಗಳು (ನಿಶಾನೆ 1 ರಿಂದ ಡಿ .10) ಕಪಟದಿಂದ ಸೃಷ್ಟನೆ ಮಾಡಿದ ದಸ್ತಾವೇಜುಗಳೇ ಎಂದು ಉಲ್ಲೇಖಿಸಿ, ದಾವೆಯನ್ನು ವಿಲೆ ಸಹ ಮಾಡಿರುತ್ತಾರೆ.

2.1 ಸದರಿ ದಸ್ತಾವೇಜುಗಳು ಕಪಟದಿಂದ ಸೃಷ್ಟನೆ ಮಾಡಿದವುಗಳೆಂದು ಕಂಡು ಬಂದ ತರುವಾಯ, ಫಿರ್ಯಾದುದಾರ (ಇಲ್ಲಿನ ಆರ್ .1) ಆಪಾದಿತ ಅಪರಾಧಗಳಿಗಾಗಿ, ಪ್ರತ್ಯರ್ಜಿದಾರ/ಆಪಾದಿತರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಕ್ರಿಮಿನಲ್ ನ್ಯಾಯಾಲಯದ ಘೋಷಣೆ ಕೋರಿ ಮೇಲೆ ಹೇಳಲಾದಂತೆ ಖಾಸಗಿ ದೂರನ್ನು ಸಲ್ಲಿಸಿರುತ್ತಾರೆ.ಅಧಿವಿಚಾರಣಾ ಮ್ಯಾಜಿಸ್ಟ್ರೇಟರು ದೂರಿನ ಘಟಕಾಂಶಗಳನ್ನು ಹಾಗೂ ಫಿರ್ಯಾದುದಾರನ

ಪ್ರಮಾಣದ ಹೇಳಿಕೆಯನ್ನು ಗಮನಿಸಿದ ನಂತರ, ಕ್ರಿಮಿನಲ್ ಪ್ರಕರಣದ ನೋಂದಣಿಗೆ ಹಾಗೂ ಇಲ್ಲಿನ ಅರ್ಜಿದಾರ ವಿರುದ್ಧ ಸಮನುಗಳನ್ನು ಮಾಡಲು ಆದೇಶಿಸುತ್ತಾರೆ.ಸದರಿ ಆದೇಶವನ್ನು ಈ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿರುತ್ತದೆ.

3. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ನಿಶಾನೆ ಡಿ .1 ರಿಂದ ಡಿ .10 ರ ವರೆಗಿನ ನಿಶಾನೆಗಳು ಕಪಟದಿಂದ ಸೃಷ್ಟನೆ ಮಾಡಿದ ದಸ್ತಾವೇಜುಗಳೆಂಬ ತೀರ್ಪನ್ನು ಈಗಾಗಲೇ ಸಿವಿಲ್ ನ್ಯಾಯಾಲಯವು ಅಭಿಪ್ರಾಯಪಟ್ಟಿರುವುದರಿಂದ ವಿಷಯವು ಸಿವಿಲ್ ನ್ಯಾಯಾಲಯದ ಎದುರು ವಿಚಾರಣೆ ಹಂತದಲ್ಲಿಯೆಂದು ಈ ನ್ಯಾಯಾಲಯದ ಎದುರು ವಾದಿಸಿರುತ್ತಾರೆ.ಆದಾಗ್ಯೂ, ಅರ್ಜಿದಾರರು ಅಪೀಲು ನ್ಯಾಯಾಲಯದ ಎದುರು ನಿಯತ ಮೊದಲ ಅಪೀಲನ್ನು ಸಲ್ಲಿಸಿದ್ದು, ನ್ಯಾಯಾಲಯವು ನಿರ್ಬಂಧಕಾಜ್ಞೆಯನ್ನು ನೀಡಿ, ಇದು ಪರಿಗಣನೆಗಾಗಿ ಇತ್ಯರ್ಥದಲ್ಲಿದೆ.ಯಾವುದೇ ಕಾರಣಕ್ಕಾಗಿ, ಅಪೀಲು ನ್ಯಾಯಾಲಯವು, ನೈಜತೆಯ ಉಲ್ಲೇಖದೊಂದಿಗೆ 116 ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ವಿಪರ್ಯಯಗೊಳಿಸುತ್ತದೆ ಅಥವಾ ಡಿ .1 ರಿಂದ ಡಿ .10 ರ ವರೆಗಿನ ನಿಶಾನೆಗಳಾಗಿ ಗುರುತು ಮಾಡಿದ ದಸ್ತಾವೇಜುಗಳನ್ನು ಹೊರತುಪಡಿಸಿ, ತರುವಾಯ ಫಿರ್ಯಾದುದಾರ (ಇ.ಆರ್.1) ನು ಅರ್ಜಿದಾರರ ವಿರುದ್ಧ ಸಲ್ಲಿಸಿದ ದೂರು ಊರ್ಜಿತವಾಗಿರುವುದಿಲ್ಲ.

4. ಎರಡನೆಯದಾಗಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಸಿವಿಲ್ ನ್ಯಾಯಾಲಯಗಳು ವ್ಯವಹರಣೆಗಳನ್ನು ಮುಕ್ತಾಯಗೊಳಿಸಲು ತುಂಬಾ ದೀರ್ಘಕಾಲ ತೆಗೆದುಕೊಳ್ಳಬಹುದಾಗಿದ್ದು, ಅದರಂತೆ, ಸಿವಿಲ್ ನ್ಯಾಯಾಲಯದ ಎದುರು ವ್ಯವಹರಣೆಗಳು ಮುಕ್ತಾಯವಾಗುವವರೆಗೂ ಕಾಯಬೇಕಾದ ಅವಶ್ಯಕತೆಯಿರುವುದಿಲ್ಲವೆಂದು ವಾದಿಸಿರುತ್ತಾರೆ.ಆದ್ದರಿಂದ, ಕ್ರಿಮಿನಲ್ ನ್ಯಾಯಾಲಯಗಳು, ಸದರಿ ದಸ್ತಾವೇಜುಗಳನ್ನು ಸ್ವತಂತ್ರವಾಗಿ ಪರೀಕ್ಷಿಸುವ ಮೂಲಕ ಅವು ಕಪಟತನದಿಂದ ಸೃಷ್ಟನೆ ಮಾಡಿದ ದಸ್ತಾವೇಜುಗಳೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವ ದೃಷ್ಟಿಯಿಂದ ಕ್ರಿಮಿನಲ್ ನ್ಯಾಯಾಲಯಗಳು ಮುಂದುವರೆಯಬಹುದಾಗಿರುತ್ತದೆ.ಆದ್ದರಿಂದ, ಈತ ಕ್ರಿಮಿನಲ್ ವ್ಯವಹರಣೆಗಳನ್ನು ಈ ಆಧಾರದ ಮೇಲೆ ರದ್ದುಪಡಿಸಲಾಗುವುದಿಲ್ಲವೆಂದು ವಾದಿಸಿರುತ್ತಾರೆ.

5. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಡಿ .1 ರಿಂದ ಡಿ .10 ರ ವರೆಗಿನ ದಸ್ತಾವೇಜುಗಳನ್ನು ಸಿವಿಲ್ ನ್ಯಾಯಾಲಯದ ಎದುರು ಅವುಗಳನ್ನು ಹಾಜರುಪಡಿಸುವ ಮುನ್ನವೇ ಅಥವಾ ಸಿವಿಲ್ ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ನೀಡುವ ಮೊದಲೇ ಕಪಟದಿಂದ ಸೃಷ್ಟನೆ ಮಾಡಲಾಗಿದೆಯೆಂಬುದು ಫಿರ್ಯಾದುದಾರನ ನಿರ್ದಿಷ್ಟ ವಾದವಾಗಿದೆಯೆಂದೂ, ಆದ್ದರಿಂದ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 195 ( 1) (ಬಿ) (ii) ಪ್ರಕರಣದಡಿಯಲ್ಲಿ ನಿಷೇಧವನ್ನು ಅನ್ವಯಿಸಲಾಗುವುದಿಲ್ಲವೆಂದೂ, ಆದ್ದರಿಂದ ಖಾಸಗಿ ಫಿರ್ಯಾದು ಊರ್ಜಿತವಾಗುವುದಿಲ್ಲವೆಂದೂ ವಾದಿಸಿರುತ್ತಾರೆ.

6. ದಾಖಲೆ ಮೇಲಿನ ಇಡೀ ವಸ್ತು ವಿಷಯವನ್ನು ಗಮನಿಸಿದ ತರುವಾಯ, ಫಿರ್ಯಾದುದಾರನು, ಡಿ .1 ರಿಂದ ಡಿ.10 ರ ವರೆಗಿನ ನಿಶಾನೆಗಳು ಕಪಟದಿಂದ ಸೃಷ್ಟನೆ ಮಾಡಿದ ದಸ್ತಾವೇಜುಗಳೆಂಬ ಮಟ್ಟಿಗೆ ತಜ್ಞರಿಂದ ಸಿವಿಲ್ ನ್ಯಾಯಾಲಯವು ವರದಿಯನ್ನು ತರಿಸಿಕೊಂಡ ತರುವಾಯ ಮಾತ್ರ ಸಿವಿಲ್ ನ್ಯಾಯಾಲಯದ ಮುಂದೆ ಕಪಟತನದಿಂದ ಸೃಷ್ಟನೆ ಮಾಡಿದ ಡಿ .1 ರಿಂದ ಡಿ .10 ರ ವರೆಗಿನ ನಿಶಾನೆಗಳನ್ನು ಸಲ್ಲಿಸಲಾಗಿದೆಯೆಂಬುದು ತಿಳಿದುಬಂದಿರುತ್ತದೆಂದು ಫಿರ್ಯಾದಿನಲ್ಲಿ ಮಾಡಿದ ದೃಢಕ್ತಿಗಳಿಂದ ಸ್ಪಷ್ಟವಾಗಿರುತ್ತದೆ.ಆದ್ದರಿಂದ, ತರುವಾಯ, ದೂರನ್ನು ಸಲ್ಲಿಸಲು ವ್ಯಾಜ್ಯ ಕಾರಣವು ಉದ್ಭವವಾಗಿರುತ್ತದೆ.ನನಗೆ ಕಂಡುಬಂದಂತೆ, ಬೇರೆ ಬೇರೆ ಪ್ಯಾರಾಗಳಲ್ಲಿ ಫಿರ್ಯಾದಿನಲ್ಲಿ ವಿವರವಾದ ವಾಸ್ತವಾಂಶಗಳನ್ನು ಉಪಬಂಧಿಸುವ ಮೂಲಕ, ಸಾಕ್ಷದಲ್ಲಿ, ಡಿ .1 ರಿಂದ ಡಿ .10 ರ ವರೆಗಿನ ದಸ್ತಾವೇಜುಗಳು ಕಪಟದಿಂದ ಸೃಷ್ಟನೆಯಾದವುಗಳೆಂಬುದು ಫಿರ್ಯಾದುದಾರನ ನಿಲುವಾಗಿರುತ್ತದೆ.ಆದ್ದರಿಂದ, ಈ ಹಿನ್ನೆಲೆಯಲ್ಲಿ ದಂಡ ಪ್ರಕ್ರಿಯಾ ಸಂಹಿತೆ 195 ( 1) (ಬಿ) (ii) ಪ್ರಕರಣದಲ್ಲಿಯಲ್ಲಿ ನಿಷೇಧವನ್ನು ಅನ್ವಯಿಸಬೇಕೆ ಎಂಬುದು ಪರಿಗಣನೆಗಾಗಿ ಉದ್ಭವವಾದ ಅಂಶವಾಗಿರುತ್ತದೆ.

7. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪಂಚ ನ್ಯಾಯಾಧೀಶರ ಪೀಠವು, ಚ ವರದಿಯಾದ ಇಕ್ಬಾಲ್ ಸಿಂಗ್ ಮರಾವ್ ಹಾಗೂ ಮತ್ತೊಬ್ಬರು ವಿರುದ್ಧ ಮೀನಾಕ್ಷಿ ಮರಾವ್ ಹಾಗೂ ಮತ್ತೊಬ್ಬರು - 2005 ( 4) ಎಸ್ಸಿಸಿ 370,

ಪ್ರಕರಣದಲ್ಲಿ ವರದಿಯಾದ ತೀರ್ಮಾನದಲ್ಲಿ ನಿರ್ದಿಷ್ಟ ಕಾನೂನು ಪ್ರಶ್ನೆಯೊಂದಿಗೆ ವ್ಯವಹರಿಸಿರುತ್ತದೆ.ಅದರಲ್ಲಿ ಈ ಕುರಿತು ಈ ಮುಂದಿನಂತೆ ನಿಖರವಾಗಿ ಅಭಿಪ್ರಾಯಪಟ್ಟಿರುತ್ತದೆ:

ಎ. 'ದಂಡ ಪ್ರಕ್ರಿಯಾ ಸಂಹಿತೆ, 1973 ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸಲಾದ ಅಥವಾ ನೀಡಲಾದ ದಸ್ತಾವೇಜಿನ ಸಂಬಂಧದಲ್ಲಿ ನಕಲನ್ನು ಮಾಡುವುದು 195 ನೇ ಪ್ರಕರಣದ (1) (ಬಿ) (ii) ಪ್ರಕರಣದಡಿಯಲ್ಲಿ ನಿಷೇಧವಾಗುತ್ತದೆ.ಅದನ್ನು ಯಾವುದೇ ನ್ಯಾಯಾಲಯವು, ಸಂಬಂಧಪಟ್ಟ ನ್ಯಾಯಾಲಯದ ಲಿಖಿತದಲ್ಲಿನ ಫಿರ್ಯಾದನ್ನು ಹೊರತುಪಡಿಸಿದ ಅಂಥ ಯಾವುದೇ ಅಪರಾಧವನ್ನು ಸಂಜ್ಞೆಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಖಾಸಗಿ ಫಿರ್ಯಾದಿನ ವ್ಯಾಪ್ತಿ ಹಾಗೂ ಅನ್ವಯತೆಯು ಅಂಥ ವಿಷಯ ನಿರ್ವಹಣೆಯಲ್ಲಿ, ಅಂಥ ನಿಷೇಧವನ್ನು, ಪ್ರಕರಣ 195 ( 1) (ಬಿ) (ii) ನ್ನು ಯಾವುದೇ ನ್ಯಾಯಾಲಯದಲ್ಲಿನ ನಡಾವಳಿಯಲ್ಲಿ ಸಾಕ್ಷ್ಯವನ್ನು ಹಾಜರುಪಡಿಸಿದ ಅಥವಾ ನೀಡಿದ ತರುವಾಯ ದಸ್ತಾವೇಜಿನ ಸಂಬಂಧದಲ್ಲಿ ಅಂದರೆ ದಸ್ತಾವೇಜು ರಕ್ಷಣಾ ಕಾನೂನಿನಲ್ಲಿರುವ ಸಮಯದಲ್ಲಿ ಅಪರಾಧಗಳನ್ನು ನಮೂದಿಸಿದಾಗ ಮಾತ್ರ ಅನ್ವಯಿಸಬಹುದು ಅಂಥ ಅಪರಾಧವನ್ನು ನ್ಯಾಯಾಲಯದಲ್ಲಿಯ ಸಾಕ್ಷ್ಯವನ್ನು ನೀಡಿ ಇದನ್ನು ಹಾಜರುಪಡಿಸುವುದಕ್ಕೆ ಮೊದಲು ಎಸಗಿದ್ದಲ್ಲಿ, ನ್ಯಾಯಾಲಯದಿಂದ ಯಾವುದೇ ಫಿರ್ಯಾದು ಅವಶ್ಯಕವಾಗಿರುವುದಿಲ್ಲ ಹಾಗೂ ಖಾಸಗಿ ದೂರು ಊರ್ಜಿತವಾಗಿರುತ್ತದೆ-ಮುಂದುವರೆದು 195 ನೇ ಪ್ರಕರಣದ ಯೋಜನೆ ದ ಂ ಡ ಪ್ರಕ್ರಿಯಾ ಸಂಹಿತೆಯ-XXVI ಅಧ್ಯಾಯದ ಶೀರ್ಷಿಕೆಯನ್ನು ಗಮನಕ್ಕೆ ತೆಗೆದುಕೊಂಡು, ಪರಿಗಣನೆ 195 ( 1) (ಬಿ) ಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧಕ್ಕೆ ಸಂಬಂಧಿಸಿದ ಫಿರ್ಯಾದನ್ನು ನ್ಯಾಯಾಲಯದಿಂದ ಸಲ್ಲಿಸಬೇಕಾಗಿದ್ದು, ನ್ಯಾಯದ ಹಿತಾಸಕ್ತಿಯಲ್ಲಿ ಹಾಗೂ ಎಲ್ಲ ಸಂದರ್ಭಗಳಲ್ಲೂ ಅಲ್ಲದೆ ವಿಹಿತವಾದಲ್ಲಿ ಮಾತ್ರ ಸಂಬಂಧ ಪಡುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ಹಾಗಾಗಿ, 195 ( 1) ಪ್ರಕರಣದ (ಬಿ) (ii) ಖಂಡದ ವಿಸ್ತೃತ ಹಿನ್ನಲೆಯಲ್ಲಿ ಅಂದರೆ, ಇದನ್ನು ಪ್ರಕರಣಗಳಿಗೆ ವಿಸ್ತರಿಸಿದಾಗ, ಯಾವುದೇ ನ್ಯಾಯಾಲಯದಲ್ಲಿನ ನಡಾವಳಿಯಲ್ಲಿನ ಸಾಕ್ಷ್ಯವನ್ನು ನೀಡಿ ದಸ್ತಾವೇಜನ್ನು ಹಾಜರುಪಡಿಸುವ ಮೊದಲು ದಸ್ತಾವೇಜನ್ನು ಕಪಟದಿಂದ ಸೃಷ್ಟನೆ ಮಾಡಿದಲ್ಲಿ, ಅಂಥ ಮೋಸವನ್ನು ಬಲಿ ನೀಡಲೇ ಬೇಕಾಗುತ್ತದೆ ಅಥವಾ ದೂರನ್ನು ನೀಡಲು ನ್ಯಾಯದ ಹಿತಾಸಕ್ತಿಯಲ್ಲಿ ನ್ಯಾಯಾಲಯವು ವಿಹಿತವೆಂದು ಪರಿಗಣಿಸದಿರುವಲ್ಲಿ ಸೃಷ್ಟನೆ ಮಾಡಿದ ದಸ್ತಾವೇಜಿಗೆ ಪರಿಹಾರವಿರುವುದಿಲ್ಲ.ಮುಂದುವರೆದು, ನ್ಯಾಯಾಲಯವು ದೂರನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನವು ಅಧಿವಿಚಾರಣೆಯನ್ನು ವಿಳಂಬ ಮಾಡಬಹುದು, ಅದರಿ ಂ ದ ಅದು ಸಾಕ್ಷ್ಯದ ನಷ್ಟಕ್ಕೆ ಕ ಕಾರಣವಾಗಬಹುದು.ಹಾಗಾಗಿ, 195(1)(ಬಿ)(ii) ಪ್ರಕರಣದ ವಿಸ್ಕೃತ ಹಿನ್ನಲೆಯ ಒಪ್ಪಿತವಾಗಿರುವುದಿಲ್ಲ.ಸರ್ವೋಚ್ಚ ನ್ಯಾಯಾಲಯದ ಚ ಮೇಲಿನ ವ್ಯಾಖ್ಯೆಯಿಂದ ರೂಪಿತವಾದ ವಾದವು, ಸಾಕ್ಷದಲ್ಲಿ ದಸ್ತಾವೇಜನ್ನು ಹಾಜರುಪಡಿಸುವ ಅಥವಾ ನೀಡಿರುವೆಡೆಗಳಲ್ಲಿ ಸಿವಿಲ್ ಅಥವಾ ರಾಜಸ್ವ ನ್ಯಾಯಾಲಯವು ದಾಖಲು ಮಾಡಿದ ವಿವಾದಿತ ನಿರ್ಣಯಗಳ ಸಾಧ್ಯತೆಯಿರುತ್ತದೆ ಹಾಗೂ ಅದು ಖಾಸಗಿ ದೂರಿನ ಆಧಾರದ ಮೇಲೆ ಕ್ರಿಮಿನಲ್ ನ್ಯಾಯಾಲಯವು ದಾಖಲಿಸಿದುದಾಗಿದ್ದು ಅದು ಊರ್ಜಿತವಾಗಿರುವುದಿಲ್ಲ ವೆಂಬುದಾಗಿರುತ್ತದೆ.

ಬಿ. ದಂಡ ಪ್ರಕ್ರಿಯಾ ಸಂಹಿತೆ, 1973-ಎಸ್.195 ( 1) (ಬಿ) (ii) " 66 ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಸಾಕವಾಗಿ ಹಾಜರುಪಡಿಸಲಾದ ಅಥವಾ ನೀಡಲಾದ ಎಶ್ ದಸ್ತಾವೇಜಿನ ಸಂಬಂಧದಲ್ಲಿ ಅಂಥ ಆಪಾದಿತ ಅಪರಾಧವನ್ನು ಎಸಗಿದಾಗ ", ಎಂಬ ಸಾಲುಗಳ ಅರ್ಥವು ಸಾಮಾನ್ಯವಾಗಿ ನ್ಯಾಯಾಲಯದಲ್ಲಿ ದಸ್ತಾವೇಜನ್ನು ಸಾಕ್ಷ್ಯದ ರೂಪದಲ್ಲಿ ಹಾಜರುಪಡಿಸಿದ ಅಥವಾ ನೀಡಿದ ತರುವಾಯ ಅ ಂ ಥ ಅಪರಾಧವನ್ನು ಎಸಗಲಾಯಿತೆಂಬುದಾಗಿರುತ್ತದೆ.

ಸಿ. ದಂಡ ಪ್ರಕ್ರಿಯಾ ಸಂಹಿತೆ, 1973-ಪ್ರಕರಣ 340 ಎನ್ ಹಾಗೂ 195 ( 1) (ಬಿ)-195 ( 1) (ಬಿ) ಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧಗಳನ್ನು ಎಸಗಿದ್ದಕ್ಕೆ ಸಂಬಂಧಿಸಿದಂತೆ ಫಿರ್ಯಾದನ್ನು ಮಾಡುವುದು.-ಅಂಥ ಫಿರ್ಯಾದನ್ನು ಮಾಡಲು ನ್ಯಾಯಾಲಯವು ಬದ್ಧವಾಗಿರದ ಸಂಬಂಧದಲ್ಲಿನ ನ್ಯಾಯಾಲಯದ ಅಧಿಕಾರ ಎಲ್ಲಾ ಸಂದರ್ಭಗಳಲ್ಲದೆ ನ್ಯಾಯದ ಹಿತಾಸಕ್ತಿಯಲ್ಲಿ ವಿಹಿತವಾದಲ್ಲಿ ಮಾತ್ರ ಫಿರ್ಯಾದನ್ನು ಮಾಡಬಹುದಾಗಿರುತ್ತದೆ.ಈ ವಿಹಿತತೆಯನ್ನು, ಅಪರಾಧದಿಂದ ಬಾಧಿತರಾದ ವ್ಯಕ್ತಿಯು ಅನುಭವಿಸುತ್ತಿರುವ ನೋವಿನಿಂದಲ್ಲದೆ, ನ್ಯಾಯದ ಆಡಳಿತದ ಮೇಲೆ ಅಪರಾಧದ ಪರಿಣಾಮಕ್ಕೆ ಅಥವಾ ಪ್ರಭಾವಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಸಾಮಾನ್ಯವಾಗಿ ತೀಮಾನಿಸಬೇಕಾಗಿರುತ್ತದೆ.

8. ಮೇಲೆ ಪ್ರಸ್ತಾಪಿಸಿದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸದರಿ ಚ ಅಭಿಪ್ರಾಯಗಳು ಹಾಗೂ ಮಾರ್ಗದರ್ಶಿಸೂತ್ರಗಳು, ದಂಡ ಪಕ್ರಿಯಾ ಸಂಹಿತೆಯ 195 ( 1) ನೇ ಪ್ರಕರಣದಡಿಯಲ್ಲಿ ನಮೂದಿಸಿದ ಅಪರಾಧಗಳನ್ನು, ನ್ಯಾಯಾಲಯದ ಎದುರು ದಸ್ತಾವೇಜುಗಳನ್ನು ಹಾಜರುಪಡಿಸುವ ಮೊದಲು ಅಥವಾ ಸಾಕ್ಷ್ಯವನ್ನು ನೀಡುವ ಮೊದಲು ಯಾವುದೇ ದಸ್ತಾವೇಜಿನ ಸಂಬಂಧದಲ್ಲಿ ಮಾಡಿರಬೇಕೆಂಬುದನ್ನು ಸುಸ್ಪಷ್ಟಪಡಿಸುತ್ತವೆ.ತರುವಾಯ 195 ( 1) (ಬಿ) (ii) ಪ್ರಕರಣದಡಿಯಲ್ಲಿನ ನಿಷೇಧವನ್ನು ಅನ್ವಯಿಸಲಾಗುವುದಿಲ್ಲ.ಆದ್ದರಿಂದ ಕಪಟದಿಂದ ಸೃಷ್ಟನೆ ಮಾಡಿರುವಂಥ ದಸ್ತಾವೇಜುಗಳನ್ನು ಸಾಕ್ಷ್ಯದ ರೂಪದಲ್ಲಿ ಸಲ್ಲಿಸುವಾಗ ನ್ಯಾಯಾಲಯದ ಮುಂದೆ ಹಾಜರುಪಡಿಸುವ ಮೊದಲು ಖಾಸಗಿ ದೂರನ್ನು ಬಾಧಿತ ಪಕ್ಷಕಾರನು ನಿರ್ವಹಿಸಬಹುದೆಂದು ಸ್ಪಷ್ಟವಾಗಿ ನಿರೂಪಿಸದೆಯೂ ಹಾಗೆ ಮಾಡಬಹುದಾಗಿರುತ್ತದೆ.ಅಲ್ಲದೆ, ಸದರಿ ದಸ್ತಾವೇಜುಗಳನ್ನು ಹಾಜರುಪಡಿಸಿದ ತರುವಾಯ, ದಸ್ತಾವೇಜುಗಳು ನ್ಯಾಯಾಲಯದ ಅಭಿರಕ್ಷೆಯಲ್ಲಿರುವಾಗ, ದಸ್ತಾವೇಜುಗಳನ್ನು ಹಾಳು ಮಾಡಿದರೆ ಅಥವಾ ನಕಲು ಮಾಡಿದರೆ ಅಥವಾ ಕಪಟದಿಂದ ಸೃಷ್ಟನೆ ಮಾಡಿದರೆ ಹಾಗೂ ಅಂಥ ಸಂದರ್ಭಗಳಡಿಯಲ್ಲಿ ದಸ್ತಾವೇಜುಗಳನ್ನು ಸಾಕ್ಷ್ಯದ ರೂಪದಲ್ಲಿ ನೀಡಿದಲ್ಲಿ, ಅಂಥ ಸಂದರ್ಭಗಳಡಿಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 195 ( 1) (ಬಿ) (ii) ಪ್ರಕರಣದಡಿಯಲ್ಲಿನ ನಿಷೇಧವನ್ನು ಅನ್ವಯಿಸಲಾಗಿರುತ್ತದೆ ಹಾಗೂ ಇಂಥ ಸಂದರ್ಭಗಳಲ್ಲಿ, 463 ಅಥವಾ 471 ಅಥವಾ 475 ಅಥವಾ 476 ನೇ ಪ್ರಕರಣಗಳಡಿಯಲ್ಲಿ ಅಪರಾಧಗಳನ್ನು ಎಸಗುವ ಮೊದಲು ನ್ಯಾಯಾಲಯದ ಲಿಖಿತದಲ್ಲಿನ ದೂರನ್ನು ಹೊರತುಪಡಿಸಿ, ಕ್ರಿಮಿನಲ್ ನ್ಯಾಯಾಲಯವು ದೂರನ್ನು ಪುರಸ್ಕರಿಸಲಾಗುವುದಿಲ್ಲವೆಂಬ ಸಂದೇಹವನ್ನು ಸಂಪೂರ್ಣವಾಗಿ ನಿವಾರಿಸುತ್ತದೆ.ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲಿನ ಸದರಿ ತೀರ್ಪು 9, ದಸ್ತಾವೇಜುಗಳಿಗೆ ಸಂಬಂಧಿಸಿದ ಅಪರಾಧಗಳಾಗಿರದೆ, ಖಾಸಗಿ ವ್ಯಕ್ತಿಗಳ ವಿರುದ್ಧವಾಗಿಯೂ ಇರುತ್ತದೆಂಬುದು ಸುಸ್ಪಷ್ಟವಾಗಿರುತ್ತದಾದರೂ, ಇದು ನ್ಯಾಯಾಲಯಗಳು ನೀಡುವ ನ್ಯಾಯ ನಿರ್ವಹಣೆಯನ್ನು ಬಾಧಕಪಡಿಸುವ ಅಪರಾಧಕ್ಕೆ ಕಾರಣವಾಗುತ್ತವೆ.ಆದ್ದರಿಂದ, ಸದರಿ ಉಪಬಂಧದಡಿಯಲ್ಲಿ, ದಸ್ತಾವೇಜುಗಳು ನ್ಯಾಯಾಲಯದ ಅಭಿರಕ್ಷೆಯಲ್ಲಿರುವಾಗ ಹಾಗೂ ಅಂಥ ದಸ್ತಾವೇಜುಗಳ ಉಲ್ಲೇಖದೊಂದಿಗೆ ಅಂಥ ಅಪರಾಧಗಳನ್ನು ಎಸಗಿರುವಾಗ, ವಿಷಯದೊಂದಿಗೆ ವ್ಯವಹರಿಸಲು ಸಕ್ಷಮ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಕ್ಕೆ ಸದರಿ ಅಪರಾಧಗಳನ್ನು ಉಲ್ಲೇಖಿಸಲು ಸದರಿ ನ್ಯಾಯಾಲಯಕ್ಕೆ ಇದು ವಿಹಿತವಾಗಿ ಪರಿಣಮಿಸುತ್ತದೆಂಬುದು ಸ್ಪಷ್ಟವಾಗಿರುತ್ತದೆ.

9. ನಾನು ಈಗಾಗಲೇ ಹೇಳಲಾದಂತೆ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಯಾವುದೇ ಸಿವಿಲ್ ನಡಾವಳಿಗಳನ್ನು ಸಲ್ಲಿಸುವ ಮೊದಲು ದಸ್ತಾವೇಜುಗಳನ್ನು ನಕಲು ಮಾಡಿದ್ದರೆ ಅಥವಾ ಹಾನಿಪಡಿಸಿದ್ದರೆ, ಅಂಥ ವಿವಾದಿತ ದಸ್ತಾವೇಜುಗಳ ಆಧಾರದ ಮೇಲೆ ಖಾಸಗಿ ಫಿರ್ಯಾದನ್ನು ಸಲ್ಲಿಸಲಾಗುವುದಿಲ್ಲ.ಒಂದು ವೇಳೆ ಅವುಗಳನ್ನು ನೀಡಲಾದ ಸಾಕ್ಷ್ಯದಲ್ಲಿ ಬಳಸಿದಲ್ಲಿ, ತರುವಾಯ ಸ್ವತಃ ಸಿವಿಲ್ ನ್ಯಾಯಾಲಯವು ಅದನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಅಂಥ ಕ್ರಿಮಿನಲ್ ಅಪರಾಧಗಳೊಂದಿಗೆ ವ್ಯವಹರಿಸಲು ಸಕ್ಷಮ ನ್ಯಾಯಾಲಯವು ಹೊಂದಿರುವ ಅಧಿಕಾರ ವ್ಯಾಪ್ತಿಗೆ ಫಿರ್ಯಾದನ್ನು ಉಲ್ಲೇಖಿಸಬೇಕೆಂದು ವಾದಿಸಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪ ಹಾಗೂ ಉಪಬಂಧವನ್ನು ಭಿನ್ನಗೊಳಿಸಲು ಪ್ರಯತ್ನಿಸಿರುತ್ತಾರೆ.ಆದರೆ ಮಾನ್ಯ ವಕೀಲರ ಸದರಿ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.195 ( 1) (ಬಿ) (ii) ನೇ ಪ್ರಕರಣವನ್ನು ಸರಿಯಾಗಿ ಹಾಗೂ ಅರ್ಥವತ್ತಾಗಿ ಪರಿಭಾಷಿಸಿದಲ್ಲಿ ಅಂಥ ಅಪರಾಧಗಳನ್ನು, ಅಂಥ ದಸ್ತಾವೇಜುಗಳನ್ನು ಹಾಜರುಪಡಿಸಿದ ತರುವಾಯ ಅಥವಾ ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ನೀಡುವ ಸಮಯದಲ್ಲಿ ನ್ಯಾಯಾಲಯದ ಮುಂದೆ ತರಲೇ ಬೇಕೆಂದು ಯಾರಿಗಾದರೂ ಅರ್ಥವಾಗುತ್ತದೆ.

9.1 ಸದರಿ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಮೊದಲು ಹಾಳಾದ ಅಥವಾ ನಕಲು ಮಾಡಿದಂಥ ದಸ್ತಾವೇಜುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾದಂತೆ ಕೆಲವೊಮ್ಮೆ ಸಿವಿಲ್ ನ್ಯಾಯಾಲಯದ ಮುಂದೆ ಹಾಜರುಪಡಿಸುವಾಗಲೂ ಹೀಗಾಗಿರಬಹುದು.ಸಿವಿಲ್ ನ್ಯಾಯಾಲಯಕ್ಕೆ ದಸ್ತಾವೇಜುಗಳನ್ನು ಹಾನಿಮಾಡಲಾಗಿದೆಯೆಂದು ಕಂಡುಬಂದಿದ್ದಾಗ್ಯೂ, ನ್ಯಾಯಾಲಯದ ಮುಂದೆ ಹಾಜರುಪಡಿಸುವುದಕ್ಕೆ ದಸ್ತಾವೇಜುಗಳನ್ನು ಹಾನಿಮಾಡಲಾಗಿದೆಯೆಂದು ಕಂಡುಬಂದಿದ್ದಾಗ್ಯೂ, ನ್ಯಾಯಾಲಯದ ಮುಂದೆ ಹಾಜರುಪಡಿಸುವುದಕ್ಕೆ ಮೊದಲು ಅಥವಾ ಹಾಜರುಪಡಿಸಿದ ತರುವಾಯ ಅಂಥ ದಸ್ತಾವೇಜುಗಳನ್ನು ನಕಲು ಮಾಡಲಾಗಿದೆಯೆ ಎಂಬಂತೆ ಇದು ತೀರ್ಪನ್ನು ನೀಡುವ ಸ್ಥಿತಿಯಲ್ಲಿರುವುದಿಲ್ಲ.ಅಲ್ಲದೆ, ಅಂಥ ಸಂದರ್ಭಗಳಡಿಯಲ್ಲಿ ನ್ಯಾಯಾಲಯವು ಅಂಥ ದಸ್ತಾವೇಜುಗಳ ಗುಚ್ಛವನ್ನು ಹೊಂದಿದ್ದು ಅವು ಸಕ್ಷಮ ಕ್ರಿಮಿನಲ್ ನ್ಯಾಯಾಲಯಕ್ಕೆ ಅಪರಾಧಗಳನ್ನು ಉಲ್ಲೇಖಿಸಲು

ಇದನ್ನು ವಿಹಿತವೆಂದು ಭಾವಿಸಲಾಗುವುದಿಲ್ಲ.ಇಂಥ ಸಂದರ್ಭದಲ್ಲಿ, ಸಿವಿಲ್ ನ್ಯಾಯಾಲಯವು ಸಕ್ಷಮ ಸಿವಿಲ್ ನ್ಯಾಯಾಲಯಕ್ಕೆ ಫಿರ್ಯಾದನ್ನು ಉಲ್ಲೇಖಿಸದಿದ್ದಲ್ಲಿ, ಈ ದಸ್ತಾವೇಜುಗಳನ್ನು ನಕಲು ಮಾಡಿದ ಅಥವಾ ಹಾನಿ ಮಾಡಿದ ಕಾರಣದಿಂದ ಬಾಧಿತರಾದ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವ ಮೊದಲು ಯಾವುದೇ ಪರಿಹಾರವಿಲ್ಲದೆ ಹಾಜರುಪಡಿಸುವಂತಿರುವುದಿಲ್ಲ.ಆದ್ದರಿಂದ, ಅಂಥ ಅಪರಾಧವನ್ನು ಸಿವಿಲ್ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಸ್ತಾವೇಜುಗಳ ಉಲ್ಲೇಖದೊಂದಿಗೆ ಎಸಗಿದ್ದಲ್ಲಿ ಹಾಗೂ ಅಂಥ ಅಪರಾಧಗಳನ್ನು ನ್ಯಾಯಾಲಯದ ಮುಂದೆ ಅಂಥ ದಸ್ತಾವೇಜುಗಳನ್ನು ಹಾಜರುಪಡಿಸುವ ಮೊದಲು ಅಥವಾ ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ನೀಡುವ ಮೊದಲು ಎಸಗಿದ್ದಲ್ಲಿ, ಅಂಥ ಸಾಧ್ಯತೆಯಿರುವಲ್ಲಿ ಸಕ್ಷಮ ಕ್ರಿಮಿನಲ್ ನ್ಯಾಯಾಲಯದ ಮುಂದೆ ಖಾಸಗಿ ಫಿರ್ಯಾದು ಊರ್ಜಿತವಾಗಿರುತ್ತದೆ.

10. ಈ ಸಂಬಂಧದಲ್ಲಿ ನಾನು ಮತ್ತೊಂದು ಉದಾಹರಣೆಯನ್ನು ನೀಡಲು ಇಚ್ಛಿಸುತ್ತೇನೆ.ಅದರಲ್ಲಿ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕೆ ಮೊದಲು ನಕಲನ್ನು ಮಾಡಿದ ತರುವಾಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಆದರೆ, ಅವು ಈ ನ್ಯಾಯಾಲಯದ ಮುಂದೆ ಯಾವುದೇ ಸಾಕ್ಷ್ಯಕ್ಕೆ ಅಂಥ ದಸ್ತಾವೇಜುಗಳು ಒಳಪಡುವುದಿಲ್ಲ.ಸಿವಿಲ್ ನ್ಯಾಯಾಲಯದ ಎದುರು ಅಂಥ ದಸ್ತಾವೇಜುಗಳಿಗೆ ಉಲ್ಲೇಖದೊಂದಿಗೆ ಎಸಗಿದ ಅಂಥ ಅಪರಾಧಗಳಿಂದ ಯಾವುದೇ ತೊಂದರೆಯನ್ನು ಅನುಭವಿಸುವಂಥ ಪಕ್ಷಕಾರನು, ಸಕ್ಷಮ ನ್ಯಾಯಾಲಯದ ಎದುರು ಖಾಸಗಿ ದೂರನ್ನು ದಾಖಲಿಸಬಹುದಾಗಿರುತ್ತದೆ.

11. ಮೇಲಿನದರ ಹಿನ್ನಲೆಯಲ್ಲಿ, ಅರ್ಜಿದಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದವನ್ನು ಒಪ್ಪಿಕೊಳ್ಳುವುದು ಈ ನ್ಯಾಯಾಲಯಕ್ಕೆ ಸರಿಕಾಣದಿರಬಹುದು.ನಾನು ಈಗಾಗಲೇ ಮೇಲೆ ಉಲ್ಲೇಖಿಸಿದಂತೆ, ಇಲ್ಲಿನ ಪ್ರತ್ಯರ್ಜಿದಾರರು ಖಾಸಗಿ ಫಿರ್ಯಾದಿನ ಒಳಾಂಶಗಳು, ನ್ಯಾಯಾಲಯದ ಎದುರು ಇವುಗಳನ್ನು ಹಾಜರುಪಡಿಸುವ ಮೊದಲೂ ಕೂಡ ದಸ್ತಾವೇಜುಗಳನ್ನು (ನಿಶಾನೆ ಡಿ .1 ರಿಂದ ಡಿ .10) ನಕಲು ಮಾಡಲಾಗಿದೆಯೆಂಬುದು ಸ್ಪಷ್ಟವಾಗಿರುತ್ತದೆ.ಆ ದಸ್ತಾವೇಜುಗಳು ಸಿವಿಲ್ ನ್ಯಾಯಾಲಯದ ಮುಂದಿರುವ ನಡಾವಳಿಗಳ ಅವದಿಯಲ್ಲಿ ಹಾಳಾಗಿರುತ್ತವೆ ಅಥವಾ ನಕಲಾಗಿರುತ್ತವೆಂಬುದು ಈ ನ್ಯಾಯಾಲಯದ ಮುಂದಿರುವ ಹಾಗೂ ಇಲ್ಲಿನ ಅರ್ಜಿದಾರರ ವಾದವಾಗಿರುವುದಿಲ್ಲ.ಆದರೆ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಆ ದಸ್ತಾವೇಜುಗಳನ್ನು ಉದಾಹರಿಸಿದಾಗ ಅವು ನಿಖರವಾಗಿದ್ದವೆಂಬುದು ಅರ್ಜಿದಾರರ ವಾದವಾಗಿರುತ್ತದೆ.

12. ಎಲ್ಲಾ ಸಾಧ್ಯತೆಗಳೊಂದಿಗೆ, ಮೇಲಿನ ಸಂದರ್ಭಗಳ ಅಡಿಯಲ್ಲಿ, ಈ ನ್ಯಾಯಾಲಯವು, ಅಂಥ ದಸ್ತಾವೇಜುಗಳ (ನಿಶಾನೆ ಡಿ .1 ರಿಂದ ಡಿ .10) ಉಲ್ಲೇಖದೊಂದಿಗಿನ ಅಪರಾಧಗಳನ್ನು ಸಿವಿಲ್ ನ್ಯಾಯಾಲಯದ ಮುಂದೆ ಆ ದಸ್ತಾವೇಜುಗಳನ್ನು ಸಲ್ಲಿಸುವುದಕ್ಕೆ ಮೊದಲೇ ಎಸಗಲಾಗಿದೆಯೆಂದು ಆಪಾದಿಸಿದಾಗ, ತರುವಾಯ, ಖಾಸಗಿ ಫಿರ್ಯಾದು ಬಾಧಿತ ವ್ಯಕ್ತಿಯು ಕ್ರಿಮಿನಲ್ ನ್ಯಾಯಾಲಯದ ಎದುರು ಊರ್ಜಿತವಾಗಿರುತ್ತದೆ.ಆದ್ದರಿಂದ, ದೂರಿನಲ್ಲಿ ಮಾಡಲಾದ ಆಪಾದನೆಗಳನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ದಂಡನೀಯ ಉಪಬಂಧಗಳಡಿಯಲ್ಲಿ ಉಪಬಂಧಗಳನ್ನು ಸ್ಪಷ್ಟವಾಗಿ ಅನ್ವಯಿಸಿದಾಗ ಸಕ್ಷಮ ಕ್ರಿಮಿನಲ್ ನ್ಯಾಯಾಲಯದ ಮುಂದೆ ಆರಂಭವಾದ ಅಂಥ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸುವ ಪ್ರಶ್ನೆ ಇರುವುದಿಲ್ಲ ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 195 (1) (ಬಿ) (ii) ಪ್ರಕರಣದಡಿಯಲ್ಲಿನ ಹೆಚ್ಚಿನ ಷರತ್ತು ಅನ್ವಯವಾಗುವುದಿಲ್ಲ.

13. ಅರ್ಜಿದಾರರ ಪರ ಮಾನ್ಯ ವಕೀಲರು ಈ ನ್ಯಾಯಾಲಯದ ಮುಂದೆ ವಾದಿಸಿದ ಎರಡನೇ ಆಧಾರವು ಈ ಮುಂದಿನಂತಿರುತ್ತದೆ, ಅಪೀಲು (ಸಿವಿಲ್) ನ್ಯಾಯಾಲಯವು ವಸ್ತು ವಿಷಯವು ಮುಕ್ತಾಯ ಮಾಡಿದಾಗ ಹಾಗೂ ಅಧಿವಿಚಾರಣಾ (ಸಿವಿಲ್) ನ್ಯಾಯಾಲಯವು ಡಿ .1 ರಿಂದ ಡಿ .10 ರ ವರೆಗಿನ ನಿಶಾನೆಗಳು ಹಾನಿಗೊಳಗಾದ ದಸ್ತಾವೇಜುಗಳೆಂದು ಅಭಿಪ್ರಾಯಪಟ್ಟಿದ್ದು, ಸಕ್ಷಮ ನ್ಯಾಯಾಲಯಕ್ಕೆ ಫಿರ್ಯಾದನ್ನು ಉಲ್ಲೇಖಿಸಲು ವಿಫಲವಾಗಿರುತ್ತದೆ.ಮುಂದುವರೆದು, ಅಪೀಲು ಮೊದಲ ಅಪೀಲು ನ್ಯಾಯಾಲಯದ ಮುಂದೆ ಈಗಾಗಲೇ ಇತ್ಯರ್ಥದಲ್ಲಿದ್ದು, ಸಿವಿಲ್ ವಿಷಯದ ವಿಲೆಯವರೆಗೆ, ಕ್ರಿಮಿನಲ್ ಪ್ರಕರಣವನ್ನು ಆರಂಭಿಸಲಾಗುವುದಿಲ್ಲ ಅಥವಾ ಮುಂದುವರೆಯಲಾಗುವುದಿಲ್ಲ.ನನ್ನ ಅಭಿಪ್ರಾಯದಲ್ಲಿ, ಈ ವಾದವೂ ಕೂಡ, ಸಿವಿಲ್ ನ್ಯಾಯಾಲಯದ ಹಾಗೂ ಕ್ರಿಮಿನಲ್ ನ್ಯಾಯಾಲಯವು ಮುಂದಿನ ವ್ಯವಹರಣೆಗಳಂತೆ ಊರ್ಜಿತವಾಗಿರುವುದಿಲ್ಲ.ಆದರೆ ಅವುಗಳೊಟ್ಟಿಗೆ ವಿಭಿನ್ನವಾಗಿರುತ್ತವೆ.ಸಿವಿಲ್ ನ್ಯಾಯಾಲಯದ ಮುಂದೆ

ಹಾಜರುಪಡಿಸಿದಂಥ ದಸ್ತಾವೇಜುಗಳನ್ನು ಸಂಭಾವ್ಯತೆಯ ಬಾಹುಳ್ಯದಿಂದ ನಕಲು ಮಾಡಲಾಗಿದೆಯೆಂದು ರುಜುವಾತುಪಡಿಸಬೇಕಾಗಿದ್ದು, ಅದರಲ್ಲಿ ಅಂಥ ಅಪರಾಧಗಳನ್ನು ಯುಕ್ತ ಸಂದೇಹವನ್ನು ಮೀರಿ ಕ್ರಿಮಿನಲ್ ನ್ಯಾಯಾಲಯದ ಎದುರು ದಸ್ತಾವೇಜುಗಳ ಉಲ್ಲೇಖದೊಂದಿಗೆ ರುಜುವಾತುಪಡಿಸಬೇಕಾಗಿರುತ್ತದೆ.ಆದ್ದರಿಂದ, ಕ್ರಿಮಿನಲ್ ಪ್ರಕರಣದಲ್ಲಿ ಆ ದಸ್ತಾವೇಜುಗಳನ್ನು ನಕಲು ಮಾಡಲಾಗಿದೆಯೆಂದು ರುಜುವಾತುಪಡಿಸುವ ಹೆಚ್ಚಿನ ಜವಾಬ್ದಾರಿ ಫಿರ್ಯಾದುದಾರರ ಮೇಲಿರುತ್ತದೆ ಹಾಗೂ ಅಂಥ ಸಂದರ್ಭದಲ್ಲಿ, ಆಪಾದಿತನಿಗೆ, ಸದರಿ ವಿವಾದಿತ ದಸ್ತಾವೇಜುಗಳನ್ನು ಪ್ರಶ್ನಿಸುವ ಸಾಕಷ್ಟು ಅವಕಾಶ ಲಭ್ಯವಾಗುತ್ತದೆ.ಮುಂದುವರೆದು, ಇದನ್ನು ಪುಷ್ಟೀಕರಿಸಲು, ಮಾನ್ಯ ವಕೀಲರು ಪ್ರಸ್ತಾಪಿಸಿದ ನಿರ್ದಿಷ್ಟ ವಾಸ್ತವಾಂಶವನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಂ.ಎನ್. ಷರಿಫ್ -ವಿರುದ್ಧ-ಮದ್ರಾಸ್ ಸರ್ಕಾರ- ಎಐಆರ್ 1954 ಎಸ್ಸಿ 397, ಪ್ರಕರಣದಲ್ಲಿ ತನ್ನ ಹಿಂದಿನ ತೀರ್ಪುಗಳನ್ನು ಪರಿಗಣಿಸಿದ ತರುವಾಯ ಈ ಹಿಂದೆ ಉಲ್ಲೇಖಿಸಿದ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ 32 ನೇ ಚ ಪ್ಯಾರಾಗಳಲ್ಲಿನ ಮೇಲಿನ ಸದರಿ ತೀರ್ಪನ್ನು ಪರಿಗಣಿಸಿರುತ್ತದೆ.ಅದರಲ್ಲಿ, ಕೆಲವು ತತ್ವಗಳನ್ನು ವಿಧಿಸಿದ್ದು, ಅವುಗಳನ್ನು ಈ ಮುಂದಿನಂತೆ ಓದಲಾಗಿದೆ:

“32. ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯಾಲಯಗಳ ನಡುವಿನ ನಿರ್ಣಯಗಳ ವಿವಾದವನ್ನು ತಡೆಯಲು ಪ್ರಯತ್ನ ಮಾಡಬೇಕೆಂಬ ಅಂತಿಮ ನಿರ್ಣಯಕ್ಕೆ ಬರುತ್ತಾ, ಎರಡೂ ವ್ಯವಹರಣೆಗಳಲ್ಲಿ ಅ ಅಗತ್ಯಪಡಿಸಿದ ಆಧಾರಗಳ ಮಟ್ಟ ಸಂಪೂರ್ಣವಾಗಿ ಭಿನ್ನವಾದುದೆಂಬುದನ್ನು ಎತ್ತಿಹಿಡಿಯುವುದು ಅವಶ್ಯಕವಾಗಿರುತ್ತದೆ.ಸಿವಿಲ್ ಪ್ರಕರಣಗಳನ್ನು ಸಾಕ್ಷ್ಯದ ಬಾಹುಳ್ಯ ಆಧಾರದ ಮೇಲೆ ನಿರ್ಧರಿಸಿದರೆ, ಕ್ರಿಮಿನಲ್ ಪ್ರಕರಣದಲ್ಲಿ, ಪ್ರಾಸಿಕ್ಯೂಷನ್ ಹಾಗೂ ಸಾಕ್ಷ್ಯವನ್ನು ರುಜುವಾತುಪಡಿಸುವ ಇಡೀ ಹೊಣೆಗಾರಿಕೆಯನ್ನು ಸಂದೇಹಾತೀತವಾಗಿ ನೋಡಬೇಕಾಗುತ್ತದೆ.ಅದು ಯಾವುದೇ ಶಾಸನಾತ್ಮಕ ಉಪಬ 0 ಧವಾಗಿರಲೀ ಇಲ್ಲವೇ ಯಾವುದೇ ಕಾನೂನಿನ ತತ್ವವಾಗಿರಲಿ, ಒಂದು ನಡಾವಳಿಯಲ್ಲಿ ದಾಖಲಾದ ನಿರ್ಣಯಗಳನ್ನು ಅಂತಿಮವೆಂದು ಅಥವಾ ಇನ್ನೊಂದರಲ್ಲಿ ಬಂಧನಕಾರಿಯಾಗಿದೆಯೆಂದು ಪರಿಗಣಿಸಬಹುದಾಗಿದ್ದು, ಎರಡೂ ಪ್ರಕರಣಗಳನ್ನು ಅದರಲ್ಲಿ ಮಂಡಿಸಿದ ಸಾಕ್ಷ್ಯದ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆ.ಹಳೆಯ ಸ ೦ ಹಿತೆ 476 ನೇ ಪ್ರಕರಣದಡಿಯಲ್ಲಿ ಫಿರ್ಯಾದನ್ನು ಸಲ್ಲಿಸಲು ನಿರ್ದೇಶಿಸುವ ಆದೇಶದ ವಿರುದ್ಧ ಅಪೀಲಿನಲ್ಲಿ ಇಂತಹುದೇ ವಾದವನ್ನು ಪರಿಶೀಲಿಸುವಾಗ, ಎಐಆರ್ 1954 ಎಸ್ಸಿ 397 ಎಂ.ಎಸ್. ಷರೀಫ್ -ವಿರುದ್ಧ-ಮದ್ರಾಸ್ ಸರ್ಕಾರ ಪ್ರಕರಣದಲ್ಲಿ ಸಂವಿಧಾನ ಪೀಠವು ನೀಡಿದ ಈ ಮುಂದಿನ ಅಭಿಪ್ರಾಯಗಳು ಪ್ರಸ್ತಾಪಿತ ಸಮಸ್ಯೆಗೆ ಸಂಪೂರ್ಣ ಉತ್ತರವನ್ನು ನೀಡಿರುತ್ತದೆ.

* (15) ಸಿವಿಲ್ ಹಾಗೂ ಕ್ರಿಮಿನಲ್ ನಡಾವಳಿಗಳ ನಡುವೆ ಕ್ರಿ ಮಿನ್ ಲ್ ವಿಷಯಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕಾಗುತ್ತದೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.ಈ ವಿಚಾರವನ್ನು ಕುರಿತಂತೆ ಭಾರತದ ಉಚ್ಚ ನ್ಯಾಯಾಲಯಗಳಲ್ಲಿ ಚ ಕೆಲವು ಭಿನ್ನಾಭಿಪ್ರಾಯಗಳಿವೆ.ಈ ದಿಶೆಯಲ್ಲಿ ಯಾವುದೇ ಕಟ್ಟುನಿಟ್ಟಾದ ನಿಯಮವನ್ನು ವಿಧಿಸಲಾಗುವುದಿಲ್ಲ.ಆದರೆ ಸಿವಿಲ್ ಹಾಗೂ ಕಿಮಿನಲ್ ನ್ಯಾಯಾಲಯಗಳಲ್ಲಿನ ವಿವಾದಿತ ನಿರ್ಣಯಗಳ ಸಂಭಾವ್ಯತೆಯು ಸೂಕ್ತ ಪರಿಗಣನೆಯೆಂದು ನಾವು ಪರಿಗಣಿಸಲು ಸಾಧ್ಯವಿಲ್ಲ.ಒಂದು ನ್ಯಾಯಾಲಯದ ತೀರ್ಪಿಗೆ ಮತ್ತೊಂದು ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರಬೇಕೆಂದು ಅಥವಾ ಅಂಥ ಶಿಕ್ಷೆ ಅಥವಟ ಹಾನಿಯ ಕೆಲವು ಸೀಮಿತ ಉದ್ದೇಶಗಳನ್ನು ಹೊರತುಪಡಿಸಿದ ಮತ್ತು ಸೂಕ್ತವಾದುದರಿಂದ ವ್ಯಕ್ತಿವಾಗಿ ಮಾಡದಿರುವಾಗ ಅಂಥ ಸಂದರ್ಭದ ನಿರ್ಣಯವನ್ನು ಕಾನೂನು ಭಾವಿತ ರೂಪದಲ್ಲಿ ನೀಡುತ್ತದೆ.ಇಲ್ಲಿನ ಒಂದೇ ಸೂಕ್ತ ಪರಿಗಣನೆಯೆಂದರೆ ತೊಂದರೆಯ ಸಂಭಾವ್ಯತೆಯಾಗಿರುತ್ತದೆ.

(16) ನಮಗೆ ತೊಡಕಾಗಿರುವ ಮತ್ತೊಂದು ಅಂಶವೆಂದರೆ, ಸಿವಿಲ್ ದಾವೆಯು ಕೆಲವೊಮ್ಮೆ ಹಲವಾರು ವರ್ಷಗಳ ಕಾಲ ಎಳೆಯುತ್ತದೆ.ಅಲ್ಲದೆ, ಕ್ರಿಮಿನಲ್ ಪ್ರಾಸಿಕ್ಯೂಷನ್, ಸಂಬಂಧಪಟ್ಟ ಪ್ರತಿಯೊಬ್ಬರೂ ಅಪರಾಧದ ಬಗ್ಗೆ ಎಲ್ಲವನ್ನೂ ಮರೆತು ಬಿಡುವವರೆಗೂ ಕಾಯತ್ತದೆಂಬುದು ಅಪೇಕ್ಷಣೀಯ ವಾಗಿರುವುದಿಲ್ಲ.ಸಾರ್ವಜನಿಕ ಹಿತಾಸಕ್ತಿಯ, ಕ್ರಿಮಿನಲ್ ತೀರ್ಪು ಶೀಘ್ರ ಹಾಗೂ ಖಚಿತವಾಗಿರಬೇಕೆಂಬುದನ್ನು ನಿರೀಕ್ಷಿಸುತ್ತದೆ; ಅಲ್ಲದೆ ಆ ಘಟನೆಗಳು ಸಾರ್ವಜನಿಕರ ಮನಸ್ಸಿನಲ್ಲಿ ಉಳಿದಿರುವಾಗಲೇ ದೋಷಿಗೆ ಶಿಕ್ಷೆಯಾಗಬೇಕೆಂದು ಹಾಗೂ ಮುಗ್ಧರಿಗೆ ನ್ಯಾಯೋಚಿತವಾದ ಹಾಗೂ ನಿಷ್ಪಕ್ಷಪಾತವಾದ ತೀರ್ಪು ಸಾಧ್ಯವಾದಷ್ಟು ತ್ವರಿತವಾಗಿ ಲಭ್ಯವಾಗಿಬಿಡಬೇಕೆಂದೂ ನಿರೀಕ್ಷಿಸುತ್ತದೆ.ವಿಚಾರಗಳು ಸ್ಮೃತಿ ಪಟಲದಿ ೦ ದ ಜಾರಿಹೋಗಬಿಡುವುದ ಕ ಡಅ) ಅನಪೇಕ್ಷಣೀಯವಾದ ಮತ್ತೊಂದು ಕಾರಣವಾಗಿರುತ್ತದೆ.

ಆದಾಗ್ಯೂ, ಇದು ಕಟ್ಟುನಿಟ್ಟಿನ ನಿಯಮ ಆಗಿರುವುದಿಲ್ಲ.ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಪಡೆದುಕೊಂಡ ಕೆಲವು ಪರಿಗಣನೆಗಳು, ಕೆಲವು ಇತರೆ ಸಂದರ್ಭಗಳನ್ನು ಹೆಚ್ಚು ವಿಹಿತ ಹಾಗೂ ನ್ಯಾಯೋಚಿತವನ್ನಾಗಿ ಮಾಡಬಹುದಾಗಿರುತ್ತದೆ.ಉದಾಹರಣೆಗೆ, ಸಿವಿಲ್ ಪ್ರಕರಣ ಅಥವಾ ಇತರೆ ಕ್ರಿಮಿನಲ್ ವ್ಯವಹರಣೆಯು 476 ನೇ ಪ್ರಕರಣದಡಿಯಲ್ಲಿ ಆದೇಶಿದ ಪ್ರಾಸಿಕ್ಯೂಷನ್ನೆ ಅಗ್ರತೆ ನೀಡಿರುವ ದೃಷ್ಟಿಯಲ್ಲಿ ಇದನ್ನು ವಿಹಿತವಲ್ಲದಂತೆ ಮಾಡುವುದರಿಂದ ಅಂತಿಮವಾಗಿ ಇದು ಸಮೀಪದಲ್ಲಿರಬಹುದಾಗಿರುತ್ತದೆ.ಆದರೆ, ಈ ಪ್ರಕರಣದಲ್ಲಿ ನಾವು ಕ್ರಿಮಿನಲ್ ನಡಾವಳಿಗಳು ಅಂತಿಮಗೊಳ್ಳುವವರೆಗೂ ಸಿವಿಲ್ ದಾವೆಗಳು ಉಳಿದರಬೇಕೆಂದು ಅಭಿಪ್ರಾಯಪಟ್ಟಿರುತ್ತೇವೆ ' ಮೇಲಿನದರಿಂದ, ಕ್ರಿಮಿನಲ್ ನಡಾವಳಿಗಳು ಅಂಥ ದಸ್ತಾವೇಜುಗಳ ಉಲ್ಲೇಖದೊಂದಿಗೆ ಸಿವಿಲ್ ದಾವೆ ಇತ್ಯರ್ಥದಲ್ಲಿರುವುದರಿಂದ ಮಾತ್ರ ಸ್ಥಗಿತಗೊಂಡಿರಲಿಲ್ಲವೆಂಬುದು ಸುಸ್ಪಷ್ಟವಾಗಿರುತ್ತದೆ.ಆದಾಗ್ಯೂ, ಯಾವುದೇ ಕಟ್ಟುನಿಟ್ಟಾದ ನಿಯಮಗಳು ಇಲ್ಲದಿರುವುದರಿಂದ, ಎರಡೂ ಪ್ರಕರಣಗಳು ಒಟ್ಟಿಗೆ ಮುಂದುವರೆದಿವೆಯೆಂಬುದು ಸ್ಪಷ್ಟವಾಗಿದೆಯಾದರೂ, ವಿಶೇಷ ಪರಿಗಣನೆಗಾಗಿ ಹಾಗೂ ಯಾವುದೇ ವಿಶೇಷ ಸಂದರ್ಭಗಳ ಮೇಲೆ, ಸಿವಿಲ್ ಪ್ರಕರಣ ಹಾಗೂ ಕ್ರಿಮಿನಲ್ ಪ್ರಕರಣಗಳು ವಿಲೆಗಾಗಿ ಸಮೀಪದಲ್ಲಿದ್ದರೆ ಹಾಗೂ ನಿರ್ಬಂಧಕಾಜ್ಞೆಗೆ ಆಧಾರವನ್ನು ರೂಪಿಸಿದ್ದಲ್ಲಿ, ಅಂಥ ಅಂತಿಮ ಹಂತದಲ್ಲಿನ ನಡಾವಳಿಗಳು, ಪ್ರಕರಣದ ವಿಶೇಷ ಹಾಗೂ ವಿಚಿತ್ರ ಸಂದರ್ಭಗಳಡಿಯಲ್ಲಿ ಸಂದರ್ಭಾನುಸಾರ ಕ್ರಿಮಿನಲ್ ನಡಾವಳಿಗಳು ಪೂರ್ಣಗೊಳ್ಳುವವರೆಗೆ ಅಥವಾ ವಿರುದ್ಧವಾಗಿ ಸಂಬಂಧಪಟ್ಟ ಸಿವಿಲ್ ನ್ಯಾಯಾಲಯವು ತನ್ನ ನಡಾವಳಿಗಳನ್ನು ನಿರ್ಬಂಧಿಸಬಹುದು.ಮೇಲೆ ಹೇಳಿದ ಕಾರಣಗಳಿಗಾಗಿ, ಖಾಸಗಿ ದೂರನ್ನು ದಾಖಲಿಸುವುದು ಹಾಗೂ ಖಾಸಗಿ ದೂರಿನೊಂದಿಗೆ ವ್ಯವಹರಿಸುವುದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿಯಲ್ಲಿ ನಿಷೇಧಿತವಾಗಿರುವುದಿಲ್ಲ ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 195 ( 1) (ಬಿ) (ii) ಪ್ರಕರಣದಡಿಯಲ್ಲಿ ಪರಿಗಣಿಸಿದಂಥ ನಿಷೇಧವನ್ನು ಈ ಪ್ರಕರಣವು ಸಂಬಂಧಪಡುವಷ್ಟರ ಮಟ್ಟಿಗೆ ಅನ್ವಯವಾಗುವುದೇ ಇಲ್ಲ. ಹಾಗಾಗಿ, ಯಾವುದೇ ಕಾರಣಕ್ಕೂ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.ಹಾಗಾಗಿ, ಅರ್ಜಿಯನ್ನು ವಜಾಮಾಡಬೇಕೆಂದು ತೀರ್ಮಾನಿಸಲಾಗಿದೆ.ತದನುಸಾರವಾಗಿ, ಅರ್ಜಿಯು ವಜಾಗೊಂಡಿರುತ್ತದೆ.